# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.128-2011** **ಪಿ . ಡಬ್ಲುಃ 4**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಎಂ. ಕುಳ್ಳಪ್ಪ<br>ಮುದ್ದಹಳ್ಳಿ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 16-02-2023. |

**<u>ಪಾಟೀ ಸವಾಲುಃ 15 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಆರ್.ಎನ್.ಎನ್ ರವರಿಂದ</u>**

ನನಗೆ ಪ್ರತಿವಾದಿ 15 ರವರ ಗಂಡ ಗುರುಸ್ವಾಮಿ ಗೊತ್ತು. ಈ ಹಾಲಿ ಗುರುಸ್ವಾಮಿ ರವರು ಮರಣ ಹೊಂದಿರುತ್ತಾರೆ. ಗುರುಸ್ವಾಮಿ ರವರ ಜೀವಿತಾವಧಿಯಲ್ಲಿ ವಾದಿ ಮತ್ತು 1 ನೇ ಪ್ರತಿವಾದಿ ರವರು ದಾವಾ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿರಲಿಲ್ಲ. ನಾನು ಅವರ ಪಕ್ಕದಲ್ಲೇ ಇರುವುದರಿಂದ ವಾದಿಯರು ಮತ್ತು 1 ನೇ ಪ್ರತಿವಾದಿ ರವರು ವಿಭಾಗ ಮಾಡಿಕೊಳ್ಳದೇ ಇರುವ ವಿಚಾರ ನನಗೆ ತಿಳಿದಿರುತ್ತದೆ. ಸಾಮಾನ್ಯವಾಗಿ ನಮ್ಮ ಗ್ರಾಮದಲ್ಲಿ ವಿಭಾಗ ಮಾಡಬೇಕಾದರೆ ಯಜಮಾನರನ್ನು ಕರೆಸಿ ಮಾತುಕತೆ ಮಾಡಿ ಒಪ್ಪಿದ ಪಕ್ಷದಲ್ಲಿ ವಿಭಾಗವಾಗುತ್ತದೆ, ಒಪ್ಪದೇ ಇದ್ದ ಪಕ್ಷದಲ್ಲಿ ವಿಭಾಗವಾಗುವುದಿಲ್ಲ. ಒಮ್ಮೆ ವಾದಿಗಳು ಮತ್ತು ಪ್ರತಿವಾದಿಗಳು ವಿಭಾಗ ಮಾಡಿಕೊಳ್ಳಲು ಸೇರಿದ್ದು, ಅದರೆ ವಿಭಾಗವಾಗಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಗಳ ಕುಟುಂಬಕ್ಕೆ ಸೇರಿದ ಸ್ವತ್ತುಗಳಿಗೆ ಸಂಬಂಧಿಸಿದ ವ್ಯವಹಾರದ ಬಗ್ಗೆ ನನ್ನ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಉಳುಮೆ ಮಾಡುತ್ತಾರೆ ಎಂಬುದು ನನಗೆ ಗೊತ್ತು ಎಂದು ನುಡಿಯುತ್ತಾರೆ.

**<u>ಪಾಟೀ ಸವಾಲುಃ 14 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಕೆ.ಟಿ.ಆರ್ ರವರಿಂದ</u>**

ನಾನು ಹುಟ್ಟಿನಿಂದಲೂ ಮುದ್ದಹಳ್ಳಿಯ ವಾಸಿ ಎಂದರೆ ಸರಿ. ಅಪ್ಪಯ್ಯನವರಿಗೆ 3 ಜನ ಗಂಡು ಮಕ್ಕಳು ಹಾಗೂ 3 ಜನ ಹೆಣ್ಣು ಮಕ್ಕಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರಿಗೆ 3 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಇರಬಹುದು ಎಂದು ನುಡಿಯುತ್ತಾರೆ. ಗೌರಮ್ಮ ಮತ್ತು ಮಿಣಕಮ್ಮ ಅಪ್ಪಯ್ಯ ನವರ ಹೆಣ್ಣು ಮಕ್ಕಳು ಎಂದರೆ ಸರಿ. ಅಪ್ಪಯ್ಯನವರ ಜೀವಿತಾವಾಧಿಯಲ್ಲಿಯೇ ಗೌರಮ್ಮ ಮತ್ತು ಮಿಣಕಮ್ಮ ರವರಿಗೆ ಮದುವೆ ಮಾಡಲಾಗಿತ್ತು ಎಂದರೆ ಸರಿ. ಮದುವೆಯ ನಂತರ ಗೌರಮ್ಮ ಮತ್ತು ಮಿಣಕಮ್ಮ ಅವರುಗಳ

ಗಂಡನ ಮನೆಯಲ್ಲಿ ಗಂಡ ಮಕ್ಕಳೊಂದಿಗೆ ವಾಸವಿದ್ದರು ಎಂದರೆ ಸರಿ. ಗೌರಮ್ಮ ತೀರಿಕೊಂಡಿರುವ ವಿಚಾರ ನನಗೆ ಗೊತ್ತಿಲ್ಲ. ಮಿಣಕಮ್ಮನವರು ನಮ್ಮ ಊರಿನಲ್ಲಿಯೇ ಇದ್ದು ಅವರು ತೀರಿಕೊಂಡಿರುವ ವಿಚಾರ ನನಗ ಗೊತ್ತು. ಮಿಣಕಮ್ಮನವರ ಗಂಡ ಮಕ್ಕಳು ಊರಿನಲ್ಲಿಯೇ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮಿಣಕಮ್ಮ ನವರ ಗಂಡ ತೀರಿಕೊಂಡಿದ್ದು, ಮಕ್ಕಳು ಇರುತ್ತಾರೆ ಎಂದು ನುಡಿಯುತ್ತಾರೆ. ಮಿಣಕಮ್ಮನಿಗೆ ಇಬ್ಬರೂ ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳು ಇದ್ದು, ಹೆಣ್ಣು ಮಗಳು ತೀರಿಕೊಂಡಿರುತ್ತಾರೆ ಎಂದರೆ ಸರಿ. ಮಿಣಕಮ್ಮನ ಮಗಳನ್ನು ಮಿಣಕಮ್ಮ ತನ್ನ ತಮ್ಮನಿಗೆ ಮದುವೆ ಮಾಡಿಕೊಟ್ಟಿದ್ದಳು. ಮಿಣಕಮ್ಮನ ಮಕ್ಕಳ ಹೆಸರು ಶಿವಣ್ಣ ಮತ್ತು ಕೆಂಪರಾಜು. ಅಪ್ಪಯ್ಯನ ಮಕ್ಕಳು ವಿಭಾಗ ಮಾಡಿಕೊಂಡು ಬೇರೆ ಬೇರೆ ಇರುತ್ತಾರೆ ಎಂದರೆ ಸರಿಯಲ್ಲ. ಹಳೆ ಮನೆ ಬಿದ್ದು ಹೋಗಿದ್ದರಿಂದ ಅಪ್ಪಯ್ಯನ ಮಕ್ಕಳು ಬೇರೆ ಕಡೆ ಜನತಾ ಮನೆ ಕಟ್ಟಿಕೊಂಡು ವಾಸವಿರುತ್ತಾರೆ ಎಂದು ನುಡಿಯುತ್ತಾರೆ. ತೊಟ್ಟಿ ಮನೆಯನ್ನು ಅಪ್ಪಯ್ಯನವರ ಮಕ್ಕಳು ಭಾಗ ಮಾಡಿಕೊಂಡಿರುವುದಿಲ್ಲ. ಅದೇ ರೀತಿ ಬೇರೆ ಮನೆ ಕಟ್ಟಿಕೊಂಡಿರುವ ಸೈಟುಗಳನ್ನು ಸಹ ಭಾಗ ಮಾಡಿಕೊಂಡಿರುವುದಿಲ್ಲ.

2. ವಾದಿಗಳು ಮತ್ತು ಪ್ರತಿವಾದಿ-15 ರಿಂದ 17 ರವರು ನನಗೆ ಚೆನ್ನಾಗಿ ಗೊತ್ತು, ನಾನು ಅವರೊಂದಿಗೆ ವಿಶ್ವಾಸದಿಂದ ಇರುತ್ತೇನೆ. ಅಪ್ಪಯ್ಯನವರ ಮಕ್ಕಳು ವಿಭಾಗವಾಗಿದ್ದರೂ ವಾದಿಗಳು ನನ್ನೊಂದಿಗೆ ವಿಶ್ವಾಸದಿಂದ ಇರುವುದರಿಂದ ವಿಭಾಗವಾಗಿಲ್ಲ ಎಂದು ಸುಳ್ಳ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಪ್ರತಿವಾದಿಗೊಂದಿಗೂ ವಿಶ್ವಾಸದಿಂದ ಇದ್ದೇನೆ ಎಂದು ನುಡಿಯುತ್ತಾರೆ. ಅಪ್ಪಯ್ಯನವರ ಮಕ್ಕಳು ಮತ್ತು ಮೊಮ್ಮಕ್ಕಳ ನಡುವೆ ವಿಭಾಗವಾಗಿದೆಯೇ ಇಲ್ಲವೇ ಎಂಬುದಕ್ಕೆ ದಾಖಲೆಯನ್ನು ನೋಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಓದಲು ಬಾರದೇ ಇರುವುದರಿಂದ ನಾನು ದಾಖಲೆಯನ್ನು ನೋಡಿರುವುದಿಲ್ಲ, ಸಾಕ್ಷಿ ಮುಂದುವರೆದು ಒಮ್ಮೆ ವಿಭಾಗವಾಬೇಕೆಂದು ಪಂಚಾಯ್ತಿ ಸೇರಿದ್ದರು, ಆದರೆ ವಿಭಾಗ ಆಗಲಿಲ್ಲ ಎಂದು ನುಡಿಯುತ್ತಾರೆ. ವಾದಿ ವಿಭಾಗವಾಗಿಲ್ಲ ಎಂದು ಸಾಕ್ಷಿ ಹೇಳುವಂತೆ ಕೋರಿದ್ದರಿಂದ ನಾನು ನ್ಯಾಯಾಲಯದಲ್ಲಿ ಬಂದು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

**ಓ . ಹೇ. ಕೇ. ಸರಿ. ಇದ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**